# "ರೈಟ್_ಟು_ರಿಕಾಲ್" ಗುಂಪು(ರಿಜಿಸ್ಟರ್ ಆಗಿಲ್ಲ)

ಭಾರತದ ಏಕೈಕ ದೇಣಿಗೆಯನ್ನು ನಿಷೇಧಿಸಿರುವ ರಾಜಕೀಯ ಪಕ್ಷ.

## ಒಂದೇ-ಒಂದು 'ಮೂರು ಸಾಲಿನ ಕಾನೂನು' ದೇಶದ ಬಡತನ, ಭ್ರಷ್ಟಾಚಾರ ಮತ್ತು ಬಹುರಷ್ಟ್ರೀಯ ಉದ್ಯಮಿಗಳ ದಬ್ಬಾಳಿಕೆಗಳನ್ನು ಕೇವಲ ನಾಲ್ಕೇ ತಿಂಗಳುಗಳಲ್ಲಿ ಕಡಿಮೆ ಮಾಡಬಹುದು!!

ಲೇಖಕ: ರಾಹುಲ್ ಚಿಮನ್ ಭಾಯಿ ಮೆಹ್ತಾ. ಕಂಪ್ಯೂಟರ್ ಸೈನ್ಸ್, ಐಐಟಿ_ದೆಹಲಿ, ಎಂ.ಎಸ್. ರೂಟ್ಗರ್ಸ್_ನ್ಯೂಜರ್ಸಿ ಸ್ಟೇಟ್ ಯುನಿವರ್ಸಿಟಿ, ಅಮೆರಿಕ ಸಂಯುಕ್ತ ಸಂಸ್ಥಾನ. ದೂರವಾಣಿ: ೯೮೨೫೩೧ ೨೭೭೮೦; ವಿಳಾಸ: ಎಫ್೧/ಎ, ಸುಪಥ್-೨, ಜುನ ವದಜ್ ಬಸ್ ನಿಲ್ದಾಣ, ಆಶ್ರಮದ ರಸ್ತೆ, ಅಹಮದಾಬಾದ್-೧೪; ಕಛೇರಿ ಸಮಯ: ಭಾನುವಾರ ೧೦.೦೦ ಬೆಳಿಗ್ಗೆ ಇಂದ ಮಧ್ಯಾಹ್ನ ೨.೦೦ರವರೆಗೆ.

Web site: http://righttorecall.info/001el.pdf , Email: MehtaRahulC@yahoo.com , http://facebook.com/mehtarahulc

೧. TCP ಎಂದರೇನು? ಒಂದು ಘೋಷ್‌ಕರೆ ಏಕೆ ಕಡ್ಡಾಯ?

*ನಾನು "ರಾಜಕೀಯ ಗಣಿತದ 'ಸೊನ್ನೆ'ಯನ್ನು ಕಂಡುಹಿಡಿದೆ......!...... ಈ 'ಸೊನ್ನೆ'ಯು ಈ ರಾಜಕೀಯ ಗಣಿತದೊಡನೆ ಸರಿಹೊಂದುತ್ತದೆ.*

ನಾನು TCP ಎನ್ನಲಾಗುವ 'ಮೂರು ಸಾಲಿನ ಕಾನೂನ'ನ್ನು ಜಾರಿಗಾಗಿ ಉದ್ದೇಶಿಸುತ್ತೇನೆ. ಅದಕ್ಕೆ ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿಯ ಸಹಿ ಮಾತ್ರ ಬೇಕು, ಯಾವ ಕಾನೂನನ್ನು ಮಾಡುವ ಪ್ರಕ್ರಿಯೆಯೂ ಬೇಡ..... ಈ ಉದ್ದೇಶಿತ 'ಮೂರು ಸಾಲಿನ ಕಾನೂನ'ನ್ನು ಜಾರಿಗೊಳಿಸಿದ್ದೇ ಆದರೆ..... ಅದಕ್ಕೆ ಬಡತನವನ್ನು ಕಡಿಮೆಮಾಡುವ, ಪೋಲಿಸರಲ್ಲಿ ಭ್ರಷ್ಟಾಚಾರವನ್ನು , ನ್ಯಾಯಾಲಯಗಳಲ್ಲಿ ಭ್ರಷ್ಟಾಚಾರವನ್ನು ಭಟ್ಟಂಗಿತನವನ್ನು ಕಡಿಮೆಮಾಡುವ, ವಿದ್ಯಾಕ್ಷೇತ್ರದಲ್ಲಿ ಸುಧಾರಣೆ ಮಾಡುವ ಮತ್ತು ಇದೆಲ್ಲವನ್ನೂ ೪ ರಿಂದ ೬ ತಿಂಗಳಲ್ಲಿ ಸಾಧಿಸುವ ಸಾಮರ್ಥ್ಯವಿದೆ!!! ಈಗ ಅಂತಹದೊಂದು ಕಾನೂನು ಇದೆಯೇ? ಒಂದು ವೇಳೆ ಇದ್ದರೆ ಅದನ್ನು ಯಾವ ಪ್ರಚಲಿತ ಬುದ್ಧಿಜೀವಿಯೂ ಇಲ್ಲಿಯ ವರೆಗೂ ಏಕೆ ಇನ್ನೂ ಕಂಡುಹಿಡಿದಿಲ್ಲ?! ಅದನ್ನು ನಾನು ನಂತರ ವಿವರಿಸುತ್ತೇನೆ......

೨. TCP ಕಾನೂನಿನ ಉದ್ದೇಶಿತ ಕರಡು......

ಈ ಉದ್ದೇಶಿತ TCP ಕಾನೂನಿನಲ್ಲಿ ಕೇವಲ ಮೂರೇ ಕ್ಲಾಝ್‌ಗಳಿವೆ – ಅವು ಈ ಕೆಳಗಿನಂತೆ ಇವೆ. ಮೂರನೆ ಕ್ಲಾಝ್ ಒಂದು ಘೋಷಣೆ ಮಾತ್ರವೇ ಆಗಿರುವುದರಿಂದ.... ಇದರಲ್ಲಿ ಕೇವಲ ಎರಡೇ ಕ್ಲಾಝ್‌ಗಳಿವೆ ಎಂದು ಹೇಳಬಹುದು.... ಆದುದರಿಂದ TCP ಹೆಸರು...... ಇದನ್ನು ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿಯು ತನ್ನ ಸಹಿ ಯೊಂದಿಗೆ ರಾಜಪತ್ರದಲ್ಲಿ (ಗೆಜೆಟ್‌ನಲ್ಲಿ) ಪ್ರಕಟಿಸಬೇಕು .......

| # | ಅಧಿಕಾರಿ | ವಿಧಾನ |
|---|---|---|
| ೧ | ಕಲೆಕ್ಟರ್ (ಅಥವಾ ಅವರ ಕ್ಲರ್ಕ) | ಈ ಸರ್ಕಾರವು ಈ ಮೂಲಕ ಕಲೆಕ್ಟರ್‌ರಿಗೆ ಆಜ್ಞೆ ಮಾಡುವುದೇನೆಂದರೆ ಅದು ಮಹಿಳಾ ಮತದಾರಳಿರಬಹುದು, ದಲಿತ ಮತದಾರ ಅಥವಾ ಹಿರಿಯ ನಾಗರೀಕ ಮತದಾರ ಅಥವಾ ಬಡ ಮತದಾರ ಅಥವಾ ರೈತ ಮತದಾರ ಅಥವಾ **ಯಾರೇ** ನಾಗರೀಕ ಮತದಾರರಾದರೂ ಸರಿ 'ರೈಟ್_ಟು_ಇನ್ಫರ್ಮೇಶನ್' ಅಥವಾ 'ಭ್ರಷ್ಟಾಚಾರದ ವಿರುದ್ಧ ದೂರು' ಅಥವಾ ಯಾವುದಾದರೂ ಅಫಿಡವಿಟ್‌ನ್ನು ಕಲೆಕ್ಟರ್‌ರಿಗೆ ಸಲ್ಲಿಸಿ ಅದನ್ನು ಪ್ರಧಾನ ಮಂತ್ರಿಗಳ 'ಅಂತರ್ಜಾಲ ನಿವೇಶ'ದಲ್ಲಿ ಪ್ರಕಟಿಸಲು ಆಗ್ರಹಿಸಿದರೆ ಅದನ್ನು ಪಡೆದು ಕೊಂದು ಪಾವತಿ ಪತ್ರವನ್ನು ನೀಡಿ ಪುಟ ಒಂದಕ್ಕೆ ರೂ. ೨೦/– ಶುಲ್ಕವನ್ನು ಪಡೆದು ಬೇಡಿಕೆಯಂತೆ ಆ ಮಾಹಿತಿಯನ್ನು ಪ್ರಧಾನ ಮಂತ್ರಿಗಳ 'ಅಂತರ್ಜಾಲ ನಿವೇಶ'ದಲ್ಲಿ ಪ್ರಕಟಿಸುವುದು. |
| ೨ | ಪಟವಾರಿ (ತಲಾಟಿ ಅಥವಾ ಅವರ ಕ್ಲರ್ಕ) | ಈ ಸರ್ಕಾರವು ಈ ಮೂಲಕ ಪಟವಾರಿಯವರಿಗೆ ಆಜ್ಞೆ ಮಾಡುವುದೇನೆಂದರೆ ಅದು ಮಹಿಳಾ ಮತದಾರಳಿರಬಹುದು, ದಲಿತ ಮತದಾರ ಅಥವಾ ಹಿರಿಯ ನಾಗರೀಕ ಮತದಾರ ಅಥವಾ ಬಡ ಮತದಾರ ಅಥವಾ ರೈತ ಮತದಾರ ಅಥವಾ **ಯಾರೇ** ನಾಗರೀಕ ಮತದಾರರಾದರೂ ಸರಿ ತಮ್ಮ ಮತದಾರರ ಗುರುತಿನ ಚೀಟಿಯೊಂದಿಗೆ ಬಂದು 'ರೈಟ್_ಟು_ಇನ್ಫರ್ಮೇಶನ್' ಅಥವಾ 'ಭ್ರಷ್ಟಾಚಾರದ ವಿರುದ್ಧ ದೂರು' ಅಥವಾ ಯಾವುದಾದರೂ ಅಫಿಡವಿಟ್‌ನ್ನು ಕಲೆಕ್ಟರ್‌ರಿಗೆ ಸಲ್ಲಿಸಿ ಪ್ರಧಾನ ಮಂತ್ರಿಗಳ 'ಅಂತರ್ಜಾಲ ನಿವೇಶ'ದಲ್ಲಿ ಪ್ರಕಟಿಸಿದ ವಿಚಾರದ ಬಗೆಗೆ ತಮ್ಮ ಮತವನ್ನು ಪರ/ವಿರೋಧವಾಗಿ ಅಂತರ್ಜಾಲದಲ್ಲಿ ನೊಂದಾಯಿಸಲು ಬಂದಾಗ ರೂ.೩/–ನ್ನು ಪಡೆದು ನೊಂದಾಯಿಸಿ ಹಣಕ್ಕೆ ರಶೀತನ್ನು ನೀಡಬೇಕು. ಹಾಗೂ ಮೇಲೆ ಹೇಳಿದ ನಾಗರೀಕರಲ್ಲಿ ಯಾರಾದರೂ ಅವರ ಮತವನ್ನು ಬದಲಾಯಿಸಲು ಬಂದಾಗಲೂ ರೂ.೩/–ನ್ನು ಪಡೆದು ನೊಂದಾವಣೆಯನ್ನು ಬದಲಾಯಿಸಿ ಹಣಕ್ಕೆ ರಶೀತನ್ನು ನೀಡಬೇಕು. ಈ ಶುಲ್ಕ 'ಬಡತನದ ರೇಖೆಯ ಕೆಳಗಿರುವ'ವರಿಗೆ ರೂ. ೧/– ಆಗಿರುತ್ತದೆ. |
| ೩ | ----- | ಮೇಲೆ ವಿವರಿಸಿದಂತೆ ಸಂದಾಯವಾದ 'ರೈಟ್_ಟು_ಇನ್ಫರ್ಮೇಶನ್' ಅಥವಾ 'ಭ್ರಷ್ಟಾಚಾರದ ವಿರುದ್ಧ ದೂರು' ಅಥವಾ ಯಾವುದಾದರೂ ಅಫಿಡವಿಟ್‌ನ ಪರ/ವಿರೋಧ ಮತದ ಎಣಿಕೆ ಪ್ರಧಾನ ಮಂತ್ರಿ/ ಮುಖ್ಯ ಮಂತ್ರಿ, ಅಧಿಕಾರಿಗಳು, ನ್ಯಾಯಾಧೀಶರು, ಮುಂತಾದವರುಗಳನ್ನು ಯಾವುದೇ ತರಹ ನಿರ್ಬಂಧಿಸುವುದಿಲ್ಲ. ಈ ಮತಗಳು ೩೭ ಕೋಟಿಗೂ ಮೇಲೆ, ಅದು ಮಹಿಳಾ ಮತದಾರಳಿರಬಹುದು, ದಲಿತ ಮತದಾರ ಅಥವಾ ಹಿರಿಯ ನಾಗರೀಕ ಮತದಾರ ಅಥವಾ ಬಡ ಮತದಾರ ಅಥವಾ ರೈತ ಮತದಾರ ಅಥವಾ **ಯಾರೇ** ನಾಗರೀಕ ಮತದಾರರಿಂದ, **ಪರವಾಗಿ** ಚಲಾಯಿತವಾಗಿದ್ದರೆ ಆಗ ಪ್ರಧಾನ ಮಂತ್ರಿಗಳು ಬೇಕಾದಲ್ಲಿ ಅಗತ್ಯ ಕ್ರಮವನ್ನು ತೆದುಕೊಳ್ಳಬಹುದು ಅಥವಾ ಅಗತ್ಯ ಕ್ರಮವನ್ನು ತೆದುಕೊಳ್ಳದೆಯೂ ಇರಬಹುದು. ಅಥವಾ ಪ್ರಧಾನ ಮಂತ್ರಿಗಳು ತಮ್ಮ ರಾಜಿನಾಮೆಯನ್ನು ನೀಡಬಹುದು ಅಥವಾ ತಮ್ಮ ರಾಜಿನಾಮೆಯನ್ನು ನೀಡದೆಯೂ ಇರಬಹುದು. ಪ್ರಧಾನಮಂತ್ರಿಗಳ ನಿರ್ಧಾರ ಅಂತಿಮವಾದುದು. |

ನಾನೀಗ ಈ ಕಾನೂನನ್ನು ಸಂಕ್ಷೇಪವಾಗಿ ವಿವರಿಸುತ್ತೇನೆ:

- ಪ್ರಜೆ ಇಷ್ಟಪಟ್ಟರೆ, ಜಿಲ್ಲಾ ಕಛೇರಿಗೆ ಬಂದು, ತನ್ನ ಸಮಸ್ಯೆ/ದೂರನ್ನು ಪ್ರಧಾನಮಂತ್ರಿಗಳ ವೆಬ್‌ಸೈಟ್‌ನಲ್ಲಿ, ಪುಟ ಒಂದಕ್ಕೆ ರೂ.೨೦/– ರಂತೆ ಪಾವತಿಸಿ, ಪ್ರಕಟಿಸಬಹುದು.
- ಪ್ರಜೆ ಇಂತಹ ಸಮಸ್ಯೆ/ದೂರಿನ ಪರ/ವಿರೋಧವಾಗಿ ತನ್ನ ಮತವನ್ನು ಅವನು ಸಂಬಂಧಿತ ಪಟವಾರಿಗಳ ಕಛೇರಿಯಲ್ಲಿ ಬಂದು ತನ್ನ ಮತದಾರರ ಗುರುತಿನ ಚೀಟಿಯನ್ನು ತೋರಿಸಿ ಶುಲ್ಕ ರೂ.೩/– ಪಾವತಿಸಿ, ನೊಂದಾಯಿಸಬಹುದು.

ಅನುವಾದ: ಹು.ಕೆ.ಶ್ರೀಧರ

- ಪರವಾದ ಮತಗಣನೆ ಪ್ರಧಾನಮಂತ್ರಿಗಳ ಮೇಲೆ ನಿರ್ಬಂಧವಲ್ಲ,

೩. ಇಷ್ಟೇನೆಯೇ? ಹಾಗಾದರೆ ಆರ್.ಟಿ.ಐ ನ್ನ ಅರ್ಥಮಾಡಿಕೊಳ್ಳಲು ಒಂದು ದೂರವಾಣಿಕರೆ ಏಕೆ?
ಹೌದು.......... ಅಷ್ಟೇನೇ...... ಅದಕ್ಕಿಂತ ಹೆಚ್ಚೇನಿಲ್ಲ!! ಅದಕ್ಕೆ...... ಒಂದು ಪ್ರಶ್ನೆ ಈಗ: ಇಷ್ಟು ಸರಳವಾದ ಮೂರು ಸಾಲಿನ ಕಾನೂನು ಹೇಗೆ ನಮ್ಮೆಲ್ಲರ ಬಡತನದ ಸಮಸ್ಯೆಗಳನ್ನು ಪರಿಹರಿಸಬಲ್ಲದು?@! ಅಷ್ಟೇ ಜಟಿಲವಾದ ಪೋಲಿಸ್/ನ್ಯಾಯಾಧೀಶರಲ್ಲಿರುವ ಭ್ರಷ್ಟಾಚಾರದ ಸಮಸ್ಯೆಯನ್ನು ಹೇಗೆ ಪರಿಹರಿಸಬಲ್ಲದು?@!

ಈ '೩ ಸಾಲಿನ ಕಾನೂನಿನಿಂದ' ಪಶ್ಚಿಮದೇಶಗಳು ಹೇಗೆ ತಮ್ಮ **ಎಲ್ಲ** ಸಮಸ್ಯೆಗಳನ್ನು ಪರಿಹರಿಸಿಕೊಂಡಿವೆ ಎಂದು ಪೂರ್ಣಪ್ರಮಾಣದ ಪುರಾವೆ ಸಹಿತ ತಿಳಿಸಲು ೩೦೦ ಪುಟಗಳ ಪುಸ್ತಕ ಬರೆಯಬೇಕಾಗುತ್ತದೆ, ಹಲವಾರು ಲೇಖನಗಳ ಹಾಗೆ http://righttorecall.info/001el.pdf ನಲ್ಲಿ ಹಾಗೂ ಬರೆದಿದ್ದೇನೆ ಕೂಡ. ಆದರೆ ನನ್ನ ಅಭಿಪ್ರಾಯದಂತೆ ಒಬ್ಬ ಓದುಗನಿಗೆ ಚೆನ್ನಾಗಿ ಮನದಟ್ಟಾಗಬೇಕೆಂದರೆ, ದೂರವಾಣಿಯ ಮೂಲಕವಾದರೂ ಪರವಾಗಿಲ್ಲ,(ಬರಿದೇ ಲೇಖನಗಳನ್ನು ಓದುವುದಕ್ಕಿಂತ) ಒಂದು ಒಳ್ಳೆ ಚರ್ಚೆಯಾದರೆ ಒಳ್ಳೆಯದೆನಿಸುತ್ತದೆ. ದೂರವಾಣಿಯ ಮೂಲಕ ಚರ್ಚೆ ಏಕೆ ಅಷ್ಟು ಮುಖ್ಯ? ಎಲ್ಲ ಗಣಿತ ತಜ್ಞರೂ ತಮ್ಮ ಪ್ರಮೇಯಗಳನ್ನೂ ಬರೀ ಬರವಣಿಗೆಯಿಂದಲೇ ನಿರೂಪಿಸುವರಲ್ಲವೇ? ಹಾಗೆಯೇ ಈ ಆರ್.ಟಿ.ಐ.ನ್ನೂ ಏಕೆ ನಿರೂಪಿಸಲಾಗದು? ಬಾರದು? ಇಲ್ಲ! ಏಕೆಂದರೆ ಒಂದು ಹೊಸ ಕಾನೂನು ಪ್ರಸ್ತಾಪವಾದಾಗ ಅದರ ವಿವರಣೆಯಾಗುವಾಗ, ಪ್ರಜೆಗಳಿಗೆ ಹಲವಾರು ಪ್ರತಿಕೂಲ ಪರಿಣಾಮಗಳಿರುವ ಹಲವಾರು ಸಂಭಾವ್ಯ ಪ್ರಶ್ನೆಗಳು ಉದ್ಭವಿಸಬಹುದು. ಉದಾಹರಣೆಗೆ: ಒಬ್ಬರು ಪೊಟ – "ಪಿ.ಓ.ಟಿ.ಎ" (**P**revention **of** **T**error **A**ct) ಕಾಯಿದೆ ಭಯೋತ್ಪಾದನೆಯನ್ನು ಕಡಿಮೆಮಾಡುವುದೆಂದು ಉದ್ದೇಶಿಸುತ್ತಾರೆ, ಇನ್ನೊಬ್ಬರಿಗೆ ಈ ಕಾನೂನಿನಿಂದ ಪೋಲಿಸ್ ವ್ಯವಸ್ಥೆಯಲ್ಲಿ ಇನ್ನೂ ಹೆಚ್ಚು ಭ್ರಷ್ಟಾಚಾರ ಆಗಬಹುದೇ? ಎಂಬ ಅನುಮಾನ ಬರುತ್ತದೆ. ಒಬ್ಬರಿಗೆ ಕಾನೂನಿನ ಕಾರ್ಯಕ್ಷಮತೆಯ ಬಗೆಗೆ ಪ್ರಶ್ನೆ ಏಳಬಹುದು: ಈ ಕಾನೂನು ೧%ವಾದರೂ ಭಯೋತ್ಪಾದನೆಯನ್ನು ಕಡಿಮೆಮಾಡುವುದೇ? ಎಂದು. ಈ ತರಹದ ಅಡ್ಡ ಪರಿಣಾಮಗಳ ಅನುಮಾನಗಳನ್ನು ತಕ್ಷಣ ಪರಿಹಾರ ಮಾಡಿಕೊಳ್ಳುವುದು ಒಳ್ಳೆಯ ಬೆಳವಣಿಗೆ ಎಂದೂ ಇಲ್ಲದೆ ಇದ್ದರೆ ಅವರ ಆಸಕ್ತಿ ಕುಂದಬಹುದೆಂದೂ ಮತ್ತು ಈ ಕಾನೂನಿನ ಕರಡುಗಳನ್ನು ಓದುವುದನ್ನು ಮುಂದುವರಿಲು ಅಡ್ಡಿಯಾಗ ಬಹುದೆಂದೂ ಅಭಿಪ್ರಾಯ ಪಡುತ್ತೇನೆ.

ಗಣಿತ ವಿಷಯದಲ್ಲಿ ಪ್ರಮೇಯಗಳ ಸಮೀಕರಣಗಳು ಬದಲಾಗುವುದಿಲ್ಲ! ಹಾಗೆಯೇ ಅವುಗಳಿಗೆ ಯಾವ ಶಕ್ತಿ ಅಥವಾ ಅಡ್ಡ ಪರಿಣಾಮಗಳೂ ಇರುವುದಿಲ್ಲ! ಉದಾಹರಣೆಗೆ: ಒಂದು 'ತ್ರಿಕೋನದ ಮೇಲಿನ ಪ್ರಮೇಯ'ವು ೯೭% ಸರಿ ಎಂದೇನೂ ಇರುವುದಿಲ್ಲ ಅದು ಯಾವಾಗಲೂ ೧೦೦% ಸರಿಯಾಗಿಯೇ ಇರುತ್ತದೆ. 'ತ್ರಿಕೋನದ ಮೇಲಿನ ಪ್ರಮೇಯ'ವು 'ವೃತ್ತದ ಮೇಲಿನ ಪ್ರಮೇಯ'ವನ್ನು ಯಾವರೀತಿ ಇಂದಲೂ ಬಾಧಿಸುವುದಿಲ್ಲ. ಆದುದರಿಂದ ಅವುಗಳ ಬಗೆಗೆ ಅಭ್ಯಸಿಸುವಾಗ ಶಕ್ತಿ ಅಥವಾ ಅಡ್ಡ ಪರಿಣಾಮಗಳ ಪ್ರಶ್ನೆ ಓದುಗರ ಮನಸ್ಸಿನಲ್ಲಿ ಎಲ್ಲೋ ಒಂದು ಸಲ ಬರಬಹುದು. ಆದುದರಿಂದ ಈ ಬಗೆಯ ಅನುಮಾನ ಪರಿಹಾರವನ್ನು ವ್ಯಾಖ್ಯಾನ ಬರವಣಿಗೆಗಳಿಂದಲೇ ಪರಿಹರಿಸಬಹುದು. ಆದರೆ ಕಾನೂನು ನಿವೇದನೆಗಳು ಅಡ್ಡ ಪರಿಣಾಮಗಳಿರ ಬಹುದೆಂದುಕೊಂಡಾಗ ಎಷ್ಟೇ ವಿವರವಾದ ಬರವಣಿಗೆಳಿದ್ದರೂ ಬರಿದೇ ಬರವಣಿಗೆಯ ಪ್ರಶ್ನೋತ್ತರಗಳಿಂದಲೇ ಪರಿಹಾರ ಸಾಧ್ಯವಿಲ್ಲ, ದ್ವಿಮುಖ ಚರ್ಚೆಗಳು ಆಗಲೇ ಬೇಕು.
ಈಗ ನೀವು ಓದುತ್ತಿರುವ ಬರವಣಿಗೆಯು ನನ್ನ "ಉದ್ದೇಶಿತ ೩ ಸಾಲಿನ ಕಾನೂನು ಬಡತನ, ಪೋಲೀಸ್‌ರಲ್ಲಿನ ಭ್ರಷ್ಟಾಚಾರವನ್ನು ೪–೬ ತಿಂಗಳುಗಳಲ್ಲಿ ಕಡಿಮೆ ಮಾಡುತ್ತದೆ" ಎಂಬುದರ ಒಂದು ಸಂಕ್ಷೇಪ ಸಾಕ್ಷಿರೂಪ ಮಾತ್ರವಾಗಿದೆ. ಅದು ನಿಮ್ಮ ನೂರಾರು ಪ್ರಶ್ನೆಗಳಿಗೆ ಸಮಾಧಾನ ಹೇಳುವುದಿಲ್ಲ. ಆಸಕ್ತ ಓದುಗರು ನನ್ನ ಮೊಬೈಲ್ ಫೋನ್‌ಗೆ , ನಂ: ೯೮೨೫೧೨೭೭೮೦, ಕರೆ ಮಾಡಬಹುದು ಅಥವಾ ನನ್ನಂತಹ ಕಾರ್ಯಕರ್ತರನ್ನು ಸಂಪರ್ಕಿಸಬಹುದು. ಅವರ ಫೋನ್ ನಂಬರ್ 'ಆರ್ಕುಟ್ ಕಮ್ಯೂನಿಟಿ' ಪಟ್ಟಿಯಲ್ಲಿ ದೊರೆಯುತ್ತದೆ. ಓದುಗರು ನನ್ನ ಮನೆಯ ವಿಳಾಸಕ್ಕೂ ಭೇಟಿ ಮಾಡಲು ಸದಾ ಸ್ವಾಗತವಿದೆ. (ವಿವರಗಳು ಮೇಲೆ ತಿಳಿಸಿದೆ)

೪. ಈ ಕಾನೂನನ್ನು ಬಳಸಲು ಭಾರತದ ಎಲ್ಲ ಜನತೆಯೂ ಇಂಟರ್ ನೆಟ್ ಸೌಲಭ್ಯವನ್ನು ಹೊಂದಿದೆಯೇ?
ಇದೊಂದು ನನಗೆ ಎದುರಾಗುವ ಸಾಮಾನ್ಯವಾದ 'ತಪ್ಪು ಪ್ರಶ್ನೆ'! ಇದನ್ನು ನಾನು 'ತಪ್ಪು ಪ್ರಶ್ನೆ' ಎಂದೇಕೆ ಕರೆಯುತ್ತೇನೆಂದರೆ.... ಈ ಕಾನೂನು ಆರಂಭದಲ್ಲಿ ಎಲ್ಲರಲ್ಲಿಯೂ ಇಂಟರ್ ನೆಟ್ ಸೌಲಭ್ಯವನ್ನು ಅಪೇಕ್ಷಿಸುವುದಿಲ್ಲ. ಎಲ್ಲ ಜನತೆಯೂ ಇಂಟರ್ ನೆಟ್ ಸೌಲಭ್ಯವನ್ನು ಹೊಂದಿದ್ದಾರೆಯೋ ಇಲ್ಲವೋ, ಅವರು ಕಲೆಕ್ಟರ್ ಕಛೇರಿಯಲ್ಲಿ ಸ್ವತಃ ಹೋಗಿ ತಮ್ಮ 'ದೂರು' 'ಮಾಹಿತಿ ಬೇಡಿಕೆ' ಮುಂತಾದವನ್ನು ಸಲ್ಲಿಸಬೇಕು. ಎಲ್ಲ ಜನತೆಯೂ ಇಂಟರ್ ನೆಟ್ ಸೌಲಭ್ಯವನ್ನು ಹೊಂದಿದ್ದಾರೆಯೋ ಇಲ್ಲವೋ, ಅವರು ಕಲೆಕ್ಟರ್ ಕಛೇರಿ/ಪಟ್ವಾರಿ ಕಛೇರಿಯಲ್ಲಿ ಸ್ವತಃ ಹೋಗಿ ತಮ್ಮ ಪರ/ವಿರುದ್ಧದ ಮತವನ್ನು ರೂ.೩/– ಪಾವತಿಸಿ ನೊಂದಾಯಿಸಬೇಕು. ಆದುದರಿಂದ ಎಲ್ಲ ಜನತೆಯೂ ಇಂಟರ್ ನೆಟ್ ಸೌಲಭ್ಯವನ್ನು ಹೊಂದಿದ್ದಾರೆಯೋ ಇಲ್ಲವೋ ಅದರ ಅದು ಏನೂ ವ್ಯತ್ಯಾಸವನ್ನುಂಟುಮಾಡುವುದಿಲ್ಲ!! ಆದುದರಿಂದ ಎಲ್ಲ ನಾಗರೀಕರೂ ೧೮ ವರ್ಷಕ್ಕೆ ಮೇಲ್ಪಟ್ಟವರೆಲ್ಲರೂ, ಇದನ್ನು ಬಳಸಬಹುದು. ಯಾರಲ್ಲಿ ಇಂಟರ್ ನೆಟ್ ಸೌಲಭ್ಯವನ್ನು ಹೊಂದಿದ್ದಾರೆಯೋ ಅವರು ಈ ಅಫಿಡವಿಟ್‌ಗಳನ್ನು ಸುಲಭವಾಗಿ ಓದಬಹುದು. ಆಗ ಯಾರಲ್ಲಿ ಇಂಟರ್ ನೆಟ್ ಸೌಲಭ್ಯ ಇಲ್ಲವೋ ಅವರು ಯಾರು ಇಂಟರ್ ನೆಟ್ ಸೌಲಭ್ಯವನ್ನು ಹೊಂದಿದ್ದಾರೆಯೋ ಅವರನ್ನು ಕೇಳಬೇಕಾಗುತ್ತದೆ..... ಅಷ್ಟೇ!!

೫. ಈ ಆರ್.ಟಿ.೧೨ ಕಾನೂನು ೩–೪ತಿಂಗಳುಗಳಲ್ಲಿ ಹೇಗೆ ಬಡತನವನ್ನು ಹೋಗಲಾಡಿಸುತ್ತದೆ?

ಪ್ರಧಾನಮಂತ್ರಿಗಳು ಈ ಆರ್.ಟಿ.೧೨ನ್ನು ಸಹಿಮಾಡಿದ ದಿನವೇ ನಾನು ೨೦೦ ಅಫಿಡವಿಟ್ಟುಗಳನ್ನು ಕಲೆಕ್ಟರ್ ಕಛೇರಿಯಲ್ಲಿ ನೊಂದಾಯಿಸುತ್ತೇನೆ. ಅವುಗಳಲ್ಲಿ ಮೊದಲಿನದು "ಎಂ.ಆರ್.ಸಿ.ಎಂ" (**MRCM**) {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ} ಇದೊಂದು ೭ ಪುಟಗಳ ಉದ್ದೇಶಿತ ಕಾನೂನು http://righttorecall.info/001el.pdf ನಲ್ಲಿ ಪ್ರಕಟಿಸಲಾಗಿದೆ, ಈ ಕಾನೂನು ಒಂದು ಆಡಳಿತಾತ್ಮಕ ವ್ಯವಸ್ಥೆಯನ್ನು ನಿರ್ಮಿಸುತ್ತದೆ....ಅದು ದೇಶದ ಎಲ್ಲ (ಖನಿಜ, ನೀರು, ಭೂಮಿ, ಸ್ಪೆಕ್ಟ್ರಂ, ಕಾಡು, ನೆಲಬಾಡಿಗೆ, ಮುಂತಾದ) ಸಂಪನ್ಮೂಲಗಳಿಂದ ಗಳಿಸಲಾದ ಎಲ್ಲ ಆದಾಯವನ್ನೂ ದೇಶದ ಎಲ್ಲ ನಾಗರೀಕರಲ್ಲಿ ಸಮನಾಗಿ ಹಂಚಿಕೆ ಮಾಡಿ ನೇರವಾಗಿ ವಯ್ಯಕ್ತಿಕವಾಗಿ ತಲುಪಿಸುತ್ತದೆ. ಉದಾ:: ೨೦೦೮ರ ಡಿಸೆಂಬರ್ ತಿಂಗಳಲ್ಲಿ ಖನಿಜಗಳ ರಾಯಲ್ಟಿ ಮತ್ತು ಭೂಮಿ ಬಾಡಿಗೆಯು ಸುಮಾರು ರೂ. ೩೦೦೦೦ ಕೋಟಿ ಇದ್ದಿತು. ಹಾಗಾದರೆ ಈ ಕಾನೂನಿನ ಪ್ರಕಾರ ರೂ.೧೦೦೦೦ ಕೋಟಿಗಳು ಸೈನ್ಯದ ಖರ್ಚಿಗೆ ಸಂದಾಯವಾಗುತ್ತದೆ. ಉಳಿದ ರೂ. ೨೦೦೦೦ ಕೋಟಿ, ಪ್ರತಿಯೊಬ್ಬ ನಾಗರೀಕನಿಗೂ ಹಂಚಿದರೆ ತಲಾ ರೂ.೨೦೦/– ಪ್ರತಿತಿಂಗಳೂ, ಭಾರತೀಯ ಸ್ಟೇಟ್ ಬ್ಯಾಂಕ್ ಅಥವಾ ಅಂಚೆ ಉಳಿತಾಯ ಖಾತೆಯ ಮುಖಾಂತರ ಸಂದಾಯವಾಗುತ್ತದೆ. ಈ ಕೆಲಸ ಸುಗಮವಾಗಿ ನಡೆಯಲು ಕೇವಲ ೧೦೦,೦೦೦ ಕ್ಲರ್ಕಗಳ ಅಗತ್ಯವಿರುತ್ತದೆ. ಪ್ರಚಲಿತ ಭಾರತೀಯ ಸ್ಟೇಟ್ ಬ್ಯಾಂಕ್ ಹತ್ತಿರ ೩೦೦,೦೦೦ ಹಾಗೂ ಎಲ್ಲ ರಾಷ್ಟ್ರೀಯ ಬ್ಯಾಂಕ್‌ಗಳ ಒಟ್ಟು ಮಾನವ ಸಂಪನ್ಮೂಲಗಳನ್ನು ಪರಿಗಣಿಸಿದರೆ ಒಟ್ಟು ೬೦೦,೦೦೦ ಸಿಬ್ಬಂದಿ ಇರುವುದರಿಂದ ಈ ಕೆಲಸಕ್ಕೆ ಬೇಕಾದ ಸಿಬ್ಬಂದಿ ಏನೂ ಹೆಚ್ಚೇನಲ್ಲ, ಇದು ಏನೂ ತೊಂದರೆ ಇಲ್ಲದೆ ನಡೆಯಬಹುದಾಗಿದೆ.
ಈ ಸಂದರ್ಭದಲ್ಲಿ ನಾನು ಓದುಗನಿಗೆ ಒಂದು ಪ್ರಶ್ನೆಯನ್ನಿಡುತ್ತೇನೆ. ದಯವಿಟ್ಟು ಮುಂದಿನ ಲೇಖನವನ್ನು ಓದುವ ಮೊದಲು ಈ ಪ್ರಶ್ನೆಯನ್ನು ಉತ್ತರಿಸಿ:–

**ಪ್ರಶ್ನೆ ಕೇಳುವ ಮುನ್ನ ಕೆಲವು ವಿಚಾರ ಹಿನ್ನೆಲೆಗಳು:**

❖ ಪ್ರಧಾನ ಮಂತ್ರಿಗಳು ಪ್ರಜೆಗಳ ಬಲಕ್ಕೆ ಬಗ್ಗಿ ಆರ್.ಟಿ.೧೨ಕ್ಕೆ ಸಹಿಮಾಡಿದರೆಂದುಕೊಳ್ಳಿರಿ.

❖ ನಾನು ಈ "ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ} ಅಫಿಡವಿಟ್ಟನ್ನು ಕಲೆಕ್ಟರ್ ಕಛೇರಿಯಲ್ಲಿ ನೊಂದಾಯಿಸಿದ್ದೇನೆ ಎಂದುಕೊಳ್ಳಿರಿ

❖ ನನ್ನ ಇನ್ನೊಂದು ಲೇಖನದಲ್ಲಿ ಈ ವಿಚಾರ ೧೦೦ಕೋಟಿ ಜನರಿಗೆ ಹೇಗೆ ತಲುಪುವುದೆಂದು ವಿವರಿಸಿದ್ದೇನೆ........ ಜನರಿಗೆ ನಾನು ಈ "ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ} ಅಫಿಡವಿಟ್ಟನ್ನು ಕಲೆಕ್ಟರ್ ಕಛೇರಿಯಲ್ಲಿ ನೊಂದಾಯಿಸಿದ ವಿಚಾರ ತಲುಪಿದೆ ಎಂದುಕೊಳ್ಳಿರಿ

ಅನುವಾದ: ಹು.ಕೆ.ಶ್ರೀಧರ

- ನಮ್ಮ ಈ ೭೨ ಕೋಟಿ ಪ್ರಬುದ್ಧ ನಾಗರೀಕರಲ್ಲಿ, ಸುಮ್ಮನೆ **ಪ್ರಶ್ನೆಯ ಸಲುವಾಗಿ, ಬಡತನದ ರೇಖೆಯ ಕೆಳಗಿರುವವರು ಸುಮಾರು ೮೦%, ಎಂದರೆ ೫೮ಕೋಟಿಜನ ಆರ್ಥಿಕವಾಗಿ ಅಬಲರು,**

<u>ಈಗ ಓದುಗರಿಗೆ ನನ್ನ ಪ್ರಶ್ನೆ ಏನೆಂದರೆ:</u>

ಈ ೫೮ ಕೋಟಿ ಮತದಾರ, ಆರ್ಥಿಕವಾಗಿ ದುರ್ಬಲ ಜನರಲ್ಲಿ ಎಷ್ಟು ಜನರು **"ನನಗೆ ಈ ತಿಂಗಳಿಗೆ ರೂ.೨೦೦/-, ಹಣ ಬೇಡ ಭಾರತ ಸರ್ಕಾರದ ಬೊಕ್ಕಸಕ್ಕೇ ಸೇರಲಿ" ಎಂದು ಹೇಳುತ್ತಾರೆ?**

ದಯವಿಟ್ಟು ಸ್ವಲ್ಪ ಯೋಚಿಸಿ........... ಈ ಪ್ರಶ್ನೆಗೆ ಉತ್ತರಿಸಿ.......... ನಂತರ ನಿಮ್ಮ ಓದನ್ನು ಮುಂದುವರಿಸಿರಿ...........

**ಈ ಪ್ರಶ್ನೆಗೆ ನನ್ನ ಉತ್ತರವೇನೆಂದರೆ: ಸುಮಾರು ೫% ಕ್ಕಿಂತ ಕಡಿಮೆ ಜನ "ನನಗೆ ಈ ತಿಂಗಳಿಗೆ ರೂ.೨೦೦/-, ಹಣ ಬೇಡ ಭಾರತ ಸರ್ಕಾರದ ಬೊಕ್ಕಸಕ್ಕೇ ಸೇರಲಿ" ಎಂದು ಹೇಳಬಹುದು.** ಆದುದರಿಂದ ೭೨ ಕೋಟಿಯ ಹೆಚ್ಚಿನ ಪ್ರತಿಶತ ಸಂಖ್ಯೆಯ ಜನರು ಈ ರೀತಿ ಯೋಚಿಸಬಹುದು::- "ನಾವು ಕಳೆದು ಕೊಳ್ಳುವುದೇನಿದೆ? ರೂ.೩/- ಕಾಣಿಕೆ ಕೊಟ್ಟು 'ಬೆಂಬಲ' ಮತ ನೀಡಿದರೆ......... ಕತ್ತಲಲ್ಲಿ ಹೊಡೆದ ಬಾಣ ಗುರಿತಲುಪಲೂ ಬಹುದು ಪ್ರಧಾನಿಗಳು ಈ ಕಾನೂನನ್ನು ಜಾರಿಗೊಳಿಸಿದರೆ.......... ಮನೆಯಲ್ಲಿ ತಲೆಗೆ ರೂ. ೨೦೦/-ರಂತೆ ಒಂದಿಷ್ಟು ಆದಾಯವಾಗಬಲ್ಲದು" ಎಂದು.

**ಈಗ ಓದುಗನಿಗೆ ಇನ್ನೊಂದು ಪ್ರಶ್ನೆಯನ್ನಿಡುತ್ತೇನೆ::-**

**ಪ್ರಶ್ನೆಯ ಹಿನ್ನೆಲೆಯಾಗಿ ಕೆಲವು ವಿಚಾರಗಳು ಇಂತಿವೆ:**

- ಪ್ರಧಾನ ಮಂತ್ರಿಗಳು ಪ್ರಜೆಗಳ ಬಲಕ್ಕೆ ಬಗ್ಗಿ ಆರ್.ಟಿ.೧೨ಕ್ಕೆ ಸಹಿಮಾಡಿದರೆಂದುಕೊಳ್ಳಿರಿ.
- ನಾನು ಈ "ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ} ಅಫಿಡವಿಟ್ಟನ್ನು ಕಲೆಕ್ಟರ್ ಕಛೇರಿಯಲ್ಲಿ ನೊಂದಾಯಿಸಿದ್ದೇನೆ ಅದಕ್ಕೆ ಪ್ರತಿಯಾಗಿ ೪೦-೫೦ಕೋಟಿ ಜನತೆ 'ಬೆಂಬಲ' ಮತ ನೀಡಿದ್ದಾರೆಂದೂ ಎಂದುಕೊಳ್ಳಿರಿ
- ನನ್ನ ಉದ್ದೇಶಿತ ಆರ್.ಟಿ.೧೨ಕಾನೂನಿನ ಮೂರನೇ ನಿಯಮವನ್ನು ಈಗೊಮ್ಮೆ ಓದಿರಿ. ಈ ನಿಯಮದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆಂದರೆ "೭೨ಕೋಟಿ ಜನರೆಲ್ಲರೂ ಈ ಕಾನೂನಿಗೆ 'ಬೆಂಬಲ' ಮತ ನೀಡಿದ್ದರೂ ಪ್ರಧಾನ ಮಂತ್ರಿಗಳು ನನ್ನ ಅಫಿಡವಿಟ್‌ನಲ್ಲಿ ಉದ್ದೇಶಿತ ಕಾನೂನನ್ನು ಜಾರಿಗೊಳಿಸಲೇಬೇಕೆಂಬ ನಿರ್ಬಂಧ ಇಲ್ಲ."

**ಈಗ ನನ್ನ ಎರಡನೇ ಪ್ರಶ್ನೆ:**

"ಈ ಕಾನೂನನ್ನು ನಾನು ಜಾರಿಗೊಳಿಸುವುದಿಲ್ಲ" ಎಂದು ನಿರ್ಧಾರವನ್ನು ಪ್ರಧಾನ ಮಂತ್ರಿಗಳು ತೆಗೆದುಕೊಳ್ಳುವ ಧೈರ್ಯ ಮಾಡುವರೆಂದು ನಿಮಗೆ ಅನ್ನಿಸುವುದೇ? ಅಂದರೆ ೪೦-೫೦ಕೋಟಿ ಜನರ 'ಬೆಂಬಲ' ಮತವನ್ನು ಪ್ರಧಾನಿಯು ಅಲ್ಲಗಳೆಯುವರೇ.......??

ದಯವಿಟ್ಟು ಸ್ವಲ್ಪ ಯೋಚಿಸಿ........... ಈ ಪ್ರಶ್ನೆಗೆ ಉತ್ತರಿಸಿ.......... ನಂತರ ನಿಮ್ಮ ಓದನ್ನು ಮುಂದುವರಿಸಿರಿ...........

**ಈ ಪ್ರಶ್ನೆಗೆ ನನ್ನ ಉತ್ತರವೇನೆಂದರೆ:**

ಪ್ರಧಾನ ಮಂತ್ರಿಗಳು ಈ "ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿಯು ಕಾಮನ್ಸ್ ಮತ್ತು ಮಿಲಿಟರಿಗೆ} ಕಾನೂನನ್ನು ಖಂಡಿತ ಜಾರಿಗೊಳಿಸುತ್ತಾರೆ. ಏಕೆ??

ಏಕೆಂದರೆ 'ಬೆಂಬಲ' ಮತವನ್ನು ಚಲಾಯಿಸಿದ ಪ್ರತಿಯೊಬ್ಬ ಮತದಾರ ಪ್ರಜೆಗೂ ಗೊತ್ತಿರುತ್ತದೆ, ತನ್ನೊಡನೆ ಇನ್ನೂ ಎಷ್ಟು ಜನ ಈ ಬೇಡಿಕೆಯನ್ನು ಸಮರ್ಥಿಸಿ ಇದ್ದಾರೆಂದು!! ಆದುದರಿಂದ ಒಂದು ವಿರೋಧದ ಪ್ರತಿಕ್ರಿಯೆಗೆ ಅವರು ತಮಗೆ ಸಮರ್ಪಕವೆಂದು ತೋರಿದ ವಿಧಾನದಲ್ಲಿ ಬದಲು ನೀಡುತ್ತಾರೆ. ಪ್ರಧಾನ ಮಂತ್ರಿಗಳಿಗೂ ಮನವರಿಕೆಯಾಗಿರುತ್ತದೆ ಜನತೆಯ ವಿರೋಧದ ವಿಪರೀತ ಪರಿಣಾಮಗಳೇನಾಗ ಬಹುದೆಂದು. ಜನತೆ ಪ್ರಕ್ಷುಬ್ಧಗೊಂಡರೆ ತಮ್ಮ ೧೫ ಲಕ್ಷಜನ ಪೋಲೀಸ್‌ಸಿಬ್ಬಂದಿಯೂ ಅವರನ್ನು ತಡೆಯಲಾರರೆಂದು ಅವರಿಗೆ ತಿಳಿದಿದೆ. ಪ್ರಧಾನ ಮಂತ್ರಿಗಳು ಆ ಭಯದಲ್ಲಿ "ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ}ಕಾನೂನನ್ನು ನಿರಾಕರಿಸಲಾರದೇಹೋಗುವರು.

ಆರ್.ಟಿ.೧೨ಕಾನೂನಿನ ಜಾರಿಗೊಂಡ ನಂತರದ ೧-೨ತಿಂಗಳುಗಳಲ್ಲಿ ಪ್ರಧಾನ ಮಂತ್ರಿಗಳನ್ನು ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ}ಕಾನೂನನ್ನು ಜಾರಿಗೊಳಿಸಲು ಒತ್ತಾಯಿಸಬಹುದು. ಎಂ.ಆರ್.ಸಿ.ಎಂ" {ಮಿನಿರಲ್ ರಾಯಲ್ಟಿ ಕಾಮನ್ಸ್ ಮತ್ತು ಮಿಲಿಟರಿಗೆ}ಕಾನೂನನ್ನು ಜಾರಿಗೊಳಿಸಿದ ೧-೨ತಿಂಗಳುಗಳಲ್ಲಿ ಜನತೆಯು ತಮ್ಮ ಮಾಸಿಕ 'ರಾಜಧನದ ತಮ್ಮ ಪಾಲಿನ' ಆದಾಯವನ್ನು ಪಡೆಯಲು ಸಾಧ್ಯವಾಗುವುದು, ಅದರಿಂದಾಗಿ ದೇಶದಲ್ಲಿ ಬಡತನವು ಕಡಿಮೆಯಾಗುವುದು.

ಮುಂದೆ ತೆರಿಗೆ ವಿಧಾನದಲ್ಲಿ ಸೂಚಿಸಿದ ಸುಧಾರಣೆಗಳನ್ನು ಜಾರಿಗೊಳಿಸಿದಾಗ ಕೈಗಾರಿಕಾ ಉತ್ಪಾದನೆ ಹೆಚ್ಚಿ ಬಡತನವನ್ನೂ ಸಪೂರ್ಣ ನಿವಾರಣೆಮಾಡುವುದು. ಈ "ತೆರಿಗೆ ವಿಧಾನದಲ್ಲಿ ಸೂಚಿಸಿದ ಸುಧಾರಣೆ"ಗಳನ್ನು http://righttorecall.info/001el.pdf ನಲ್ಲಿ ಕಂಡುಕೊಳ್ಳಬಹುದು.

೬. **ಆರ್.ಟಿ.ಐ ಕಾನೂನು ಪೋಲೀಸ್ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರವನ್ನು ಹೇಗೆ ಕಡಿಮೆ ಮಾಡುತ್ತದೆ?**

**ಓದುಗರಿಗೆ ನನ್ನ ಮೂರನೆ ಪ್ರಶ್ನೆ:**

**ಅಮೆರಿಕ ಸಂಯುಕ್ತ ಸಂಸ್ಥಾನದ ಪೋಲೀಸ್ ವ್ಯವಸ್ಥೆಯಲ್ಲಿ (ಮಾದಕವಸ್ತುಗಳ ಸಂಬಂಧದಲ್ಲಿ ಹೊರತುಪಡಿಸಿ!) ಭ್ರಷ್ಟಾಚಾರ ಕಡಿಮೆ ಇದೆ. ಏಕೆ??**

ಅಮೆರಿಕ ಸಂಯುಕ್ತ ಸಂಸ್ಥಾನದ ಪೋಲೀಸ್ ವ್ಯವಸ್ಥೆಯಲ್ಲಿ (ಮಾದಕವಸ್ತುಗಳ ಸಂಬಂಧದಲ್ಲಿ ಹೊರತುಪಡಿಸಿ!) ಭ್ರಷ್ಟಾಚಾರ ಕಡಿಮೆ ಇರುವುದಕ್ಕೆ ಏಕೈಕ ಕಾರಣವೆಂದರೆ **ಅಮೆರಿಕ ಸಂಯುಕ್ತ ಸಂಸ್ಥಾನದ ಜನತೆ ಅಲ್ಲಿನ 'ಜಿಲ್ಲಾ ಪೋಲೀಸ್ ಕಮಿಶನರ್'ನ್ನು ಹೊರಹಾಕುವ ವ್ಯವಸ್ಥೆ**ಯನ್ನು ಹೊಂದಿದೆ!! ಆದುದರಿಂದ ಜಿಲ್ಲಾ ಪೋಲೀಸ್ ಅಧಿಕಾರಿ ಕಡಿಮೆ ಲಂಚಗುಳಿಯಾಗಿರುತ್ತಾನೆ, ಅವನಡಿಯ ಕಿರಿಯ ಅಧಿಕಾರಿಗಳು ಯಾರಾದರೂ ಲಂಚ ತೆಗೆದು ಕೊಳ್ಳುವ ಸುಳಿಹು ಸಿಕ್ಕರೂ ತಕ್ಷಣ 'ಮಿಂಚಿನ ಕಾರ್ಯಾಚರಣೆ'ಯನ್ನು ನಡೆಸಿ ಅವರ ವಿರುದ್ಧ ಪುರಾವೆಗಳನ್ನು ಒಟ್ಟುಗೂಡಿಸಿ ಅವರನ್ನು ಕೆಲಸದಿಂದ ಹೊರಹಾಕುತ್ತಾನೆ. ಏಕೆಂದರೆ ಅವನ ನಿರ್ಲಕ್ಷ್ಯದಿಂದ ಅವನ ಕೆಲಸವೇ ಹೋಗುವ ಸಂಭವವಿರುತ್ತದೆ. (ಆದರೆ ಅಮೆರಿಕದ ಜನರೇ ಮಾದಕವಸ್ತುಗಳ ಬಗೆಗೆ ಒಲವು ತೋರುವಾಗ ಆ ವಿಭಾಗದಲ್ಲಿ ಅಂತಹ ಬಿಗಿಇಲ್ಲದಿರಬಹುದು)

ಆದರೆ ಭಾರತದಲ್ಲಿ **'ಜಿಲ್ಲಾ ಪೋಲೀಸ್ ಕಮಿಶನರ್'ನ್ನು ಹೊರಹಾಕುವ ವ್ಯವಸ್ಥೆ**'ಯ ಅಭಾವವಿರುವುದರಿಂದ ಪೋಲೀಸ್ ಅಧಿಕಾರಿಗಳು ಲಂಚವನ್ನು ತಾವೂ ತೆಗೆದುಕೊಳ್ಳುತ್ತಾರೆ ಮತ್ತು ಅವರ ಕಿರಿಯ ಅಧಿಕಾರಿಗಳಿಗೂ ಲಂಚವನ್ನು ಕಲೆಹಾಕಲು ಹೇಳಿ ಅದರಲ್ಲಿ ಪಾಲನ್ನು ಎಂ.ಎಲ್.ಎ, ಗೃಹಮಂತ್ರಿ ಮತ್ತು ಮುಖ್ಯ ಮಂತ್ರಿಗಳವರೆಗೂ ತಲುಪಿಸುತ್ತಾನೆ. ಓದುಗರೇ, ನಿಮಗೆ **ಅಮೆರಿಕ ಸಂಯುಕ್ತ ಸಂಸ್ಥಾನದ ಜನತೆ ಅಲ್ಲಿನ 'ಜಿಲ್ಲಾ ಪೋಲೀಸ್ ಕಮಿಶನರ್'ನ್ನು ಹೊರಹಾಕುವ ವ್ಯವಸ್ಥೆ**ಯನ್ನು ಹೊಂದಿದೆ!! ಎಂದು ತಿಳಿದಿತ್ತೇ?? ಏಕೆಂದರೆ ನಮ್ಮ ಇಐಐ(Eminent Intellectual Indian = ಭಾರತದ ಸಕ್ಷಮ ಬುದ್ಧಿಜೀವಿಗಳು) ಈ ವಿಶಯ ನಮ್ಮ ಎಲ್ಲ ನಾಗರೀಕರಿಗೆ ತಿಳಿಯುವುದೇ ಬೇಡ ಎಂದು ಬೇಡಿಕೊಳ್ಳತ್ತಿರುತ್ತಾರೆ. ಅವರಿಗೆ ಅಂತಹ ವಿಧಾನಗಳನ್ನು ಪ್ರಜೆಗಳು ಕೇಳದಿದ್ದರೇನೇ ಲಾಭ!!

ನನ್ನ ಇನ್ನೊಂದು ಕರಡು ಕಾನೂನು ಸಿದ್ಧವಾಗಿದೆ, ಅದನ್ನು ಯಾವ ದಿನ ರಾಜ್ಯದ ಮುಖ್ಯಮಂತ್ರಿಗಳು ಜಾರಿಮಾಡುವರೋ ಆಗ ಜನತೆ ತಮ್ಮ **'ಜಿಲ್ಲಾ ಪೋಲೀಸ್ ಕಮಿಶನರ್'ನ್ನು ಹೊರಹಾಕುವ ವ್ಯವಸ್ಥೆ**ಯನ್ನು ಹೊಂದುವರು. ಆ ಕಾನೂನು ಕರಡನ್ನು ನಾನು: DPC-RP (ಜಿಲ್ಲಾ ಪೋಲೀಸ್ ಕಮಿಷನರನ್ನು ಬದಲಾಯಿಸುವ ವಿಧಾನ' ಎಂದು ಕರೆಯುತ್ತೇನೆ. ಈ ಕರಡು ನಮ್ಮ ಸಂವಿಧಾನದ ಈಗಿರುವ ಎಲ್ಲ ಕಾನೂನುಗಳು, ೩೩ ಡಜನ್ ಆರ್ಟಿಕಲ್‌ಗಳ ಎಲ್ಲ ನಿಯಮಗಳನ್ನೂ ೧೦೦% ಮೀರದಂತೆ ಇದೆ!

**ಓದುಗರಿಗೆ ನನ್ನ ನಾಲ್ಕನೆ ಪ್ರಶ್ನೆ:**

ಭಾರತದ ಯಾವುದಾದರೂ ರಾಜ್ಯದ ಮುಖ್ಯಮಂತ್ರಿ ಈ **'ಜಿಲ್ಲಾ ಪೋಲೀಸ್ ಕಮಿಶನರ್'ನ್ನು ಹೊರಹಾಕುವ'** ಕಾನೂನನ್ನು ಜಾರಿಗೊಳಿಸುವನೇ??

ಅನುವಾದ: ಹು.ಕೆ.ಶ್ರೀಧರ

ನನ್ನ ಉತ್ತರ : **ಇಲ್ಲ!** ಏಕೆಂದರೆ ಜನತೆಗೆ **‘ಜಿಲ್ಲಾ ಪೋಲೀಸ್ ಕಮಿಶನರ್’ನ್ನು ಹೊರಹಾಕುವ’** ಕಾನೂನನ್ನು ಕೊಟ್ಟರೆ ಕಮಿಷನರ್ ಲಂಚದ ಕಲೆಕ್ಷನ್ ಕಡಿಮೆಮಾಡಲೇ ಬೇಕಾಗುತ್ತದೆ ಅದರಿಂದ ಒಟ್ಟಾಗುವುದು ೧ ಕೋಟಿಇದ್ದರೆ ಒಂದು ಲಕ್ಷಕ್ಕೆ ಇಳಿದು ಹೋಗುತ್ತದೆ. ತಿಂಗಳ ವಂತಿಕೆ ಪೋಲೀಸ್ ಕಮಿಷನರ್ ರಿಂದ ಎಂ.ಎಲ್.ಎ, ಗೃಹಮಂತ್ರಿ ಮತ್ತು ಮುಖ್ಯ ಮಂತ್ರಿಗಳವರೆಗೂ ಸಂದಾಯವಾಗುತ್ತಿದ್ದುದು ೫೦ಲಕ್ಷದಿಂದ ೫೦೦೦೦ಕ್ಕೆ ಇಳಿದುಹೋಗುತ್ತದೆ. ಹಾಗಾದಾಗ ಅವರೂ ಇಂತಹ **‘ಜಿಲ್ಲಾ ಪೋಲೀಸ್ ಕಮಿಶನರ್’ನ್ನು ಹೊರಹಾಕುವ’** ಕಾನೂನುನನ್ನು ಜಾರಿಗೊಳಿಸುವುನ್ನು ನಿರಾಕರಿಸುತ್ತಾರೆ.

- ❖ ಆದರೆ ಪ್ರಜೆಗಳ ಬಲವಂತದಿಂದ ಪ್ರಧಾನ ಮಂತ್ರಿಗಳು ಆರ್.ಟಿ.ಐ ಕಾನೂನನ್ನು ಜಾರಿಗೊಳಿಸಿದ ನಂತರ ಎಲ್ಲ ಬದಲಾಗಿಹೋಗುತ್ತದೆ. ಪ್ರಧಾನ ಮಂತ್ರಿಗಳು ಪ್ರಜೆಗಳ ಬಲಕ್ಕೆ ಬಗ್ಗಿ ಆರ್.ಟಿ.ಐಕ್ಕೆ ಸಹಿಮಾಡಿದರೆಂದುಕೊಳ್ಳಿರಿ. ಆಗ ನನ್ನ ಎರಡನೇ ಅಫ್ಫಿಡವಿಟ್ ಸಲ್ಲಿಸುವುದು **‘ಜಿಲ್ಲಾ ಪೋಲೀಸ್ ಕಮಿಶನರ್’ನ್ನು ಬದಲಾಯಿಸುವ’ ಕಾನೂನು ಕರಡು** ಆಗಿರುತ್ತದೆ. ಬಹಳ ಜನರು **‘ಜಿಲ್ಲಾ ಪೋಲೀಸ್ ಕಮಿಶನರ್’ನ್ನು ಬದಲಾಯಿಸುವ’ ಕಾನೂನು** ಕೊನೆ ಪಕ್ಷ ಜಿಲ್ಲೆಯನ ಪೋಲೀಸರು ೫% ಭ್ರಷ್ಟಾಚಾರವನ್ನ ಕಡಿಮೆ ಮಾಡಿದರೂ ತಮ್ಮ ರೂ.೩/– ಬಂತೆಂದು ತಿಳಿಯುವವರಿದ್ದಾರೆ. ಈ ಕಾನೂನಿಗೆ ‘ಬೆಂಬಲ’ ಮತ ಅಧಕವಾಗಿ ಸಿಗಲು ಇನ್ನೊಂದು ಬಹಳ ಮಹತ್ತರ ಕಾರಣವೆಂದರೆ ಪೋಲೀಸ್ ವ್ಯವಸ್ಥೆಯಲ್ಲಿರುವ, (ಎಲ್ಲಿ ಸಾಮಾನ್ಯರು ತಿಂಗಳೆಲ್ಲ ಶ್ರಮವಹಿಸಿ ದುಡಿದರೂ ಸಾವಿರಗಳಲ್ಲಿ ಸಂಬಳ ನೋಡಲಾರರೋ, ಅಲ್ಲಿ) ತಿಂಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಯಾವ ಶ್ರಮವೂ ಇಲ್ಲದೆ ನುಂಗುವ, ಭ್ರಷ್ಟ ಪೋಲೀಸ ಅಧಿಕಾರಿಗಳ ಮೇಲೆ ಜನತೆಗೆ ಇರುವ ಗರಿಷ್ಠ ದ್ವೇಶ/ಅಸಮಾಧಾನವೇ ಆಗಿದೆ.

❖ ಹಾಗಾಗಿ ಮತ್ತೆ, ೭೦–೮೦% ಜನರು ತಮ್ಮ ಈ ಕಾನೂನಿಗೆ ‘ಬೆಂಬಲ’ ಮತವನ್ನು, ಆರ್.ಟಿ.ಐ ನ ವಿಧಿ ೨ನೇ ವಿಧಾನವನ್ನು ಬಳಸಿ, ನೊಂದಾಯಿಸುತ್ತಾರೆ. ಮುಖ್ಯಮಂತ್ರಿಗಳು ಭಯದಿಂದ ತನ್ನ ಎಲ್ಲ ಧೈರ್ಯವನ್ನೂ ಕಳೆದುಕೊಂಡು, ಈ ಕಾನೂನನ್ನು ಅನಿವಾರ್ಯವಾಗಿ ಜಾರಿಗೊಳಿಸಲೇ ಬೇಕಾಗುತ್ತದೆ. ಸರ್ಕಾರಿ ಅಧಿಕಾರಿ/ನ್ಯಾಯ ಮೂರ್ತಿಯೊಬ್ಬನ ಹೆಚ್ಚಿನ ಭಯದ ಕಾರಣವೆಂದರೆ ತನ್ನ ಕೆಲಸವನ್ನು ಕಳೆದುಕೊಳ್ಳುವುದು. ಆದುದರಿಂದ ಈ ಕಾನೂನು ಜಾರಿಯಾದ ೧೪ದಿನಗಳೊಳಗೆ **ಪೋಲೀಸ್ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರವು**, ಅದು ಕಮಿಷನರ್ ಮಟ್ಟದಲ್ಲಿ ಮತ್ತು ಕಿರಿಯ ಅಧಿಕಾರಿಯ ಹಂತದಲ್ಲಯೂ ಆಗಿರಬಹುದು, ೯೯% ಕಡಿಮೆಯಾಗುವುದು. ಹೀಗೆ ಆರ್.ಟಿ.೧೨ನ್ನು ಜಾರಿಯಾದ ೩ ತಿಂಗಳುಗಳಲ್ಲಿ **ಪೋಲೀಸ್ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರವು** ಶೂನ್ಯದ ಹತ್ತಿರ ಬರುವುದು.

ರೈಟ್ ಟು ರಿಕಾಲ್ ಪೊಲಿಸ್ ಕಮಿಷನರ್ ಒಂದು ಆರಂಭ ಅಷ್ಟೇ........ ಅದರ ನಂತರ ರೈಟ್ ಟು ರಿಕಾಲ್ ಪ್ರಧಾನ ಮಂತ್ರಿ, ಮುಖ್ಯ ಮಂತ್ರಿ, ಎಂ.ಎಲ್.ಎ, ಎಂ.ಪಿ, ಉಚ್ಚ ನ್ಯಾಯಾಧೀಶರು, ಹಿರಿಯ ನ್ಯಾಯಾಧೀಶರು, ರಿಜ಼ರ್ವ ಬ್ಯಾಂಕ್ ಗವರ್ನರ್, ಸ್ಟೇಟ್ ಬ್ಯಾಂಕ್ ಛೇರ್ಮೆನ್, ಜಿಲ್ಲಾ ಶಿಕ್ಷಣಾಧಿಕಾರಿ, ಮೇಯರ್ ಮತ್ತು ಇನ್ನೂ ೨೫೧ ರಾಷ್ಟ್ರೀಯ, ರಾಜ್ಯಮಟ್ಟದ ಸರ್ಕಾರಿ ಉನ್ನತ ಹುದ್ದೆಗಳಲ್ಲಿರುವವರ ಬಾರಿ ಬರುತ್ತದೆ. ಯಾವ ರಿಕಾಲ್ ಕಾನೂನನ್ನು ಜನತೆ ನಿರಾಕರಿಸುತ್ತಾರೆ? ನನ್ನ ಉತ್ತರ: ಯಾವುದನ್ನೂ ನಿರಾಕರಿಸರು!! ಹಾಗಾಗಿ ಆರ್.ಟಿ.ಐನ್ನು ಜಾರಿಗೊಳಿಸಿಯಾದ ೬ ತಿಂಗಳಲ್ಲಿ ಜನತೆ, ಪ್ರಧಾನಿಯನ್ನು ಒತ್ತಾಯಿಸಿ, ಈ ೨೫೧ ಸ್ಥಾನದ ಅಧಿಕಾರಿಗಳನ್ನೂ ಬದಲಿಸುವ ಅಧಿಕಾರದ ಕಾನೂನುಗಳನ್ನು ಜಾರಿಗೆ ತರಿಸುತ್ತದೆ. ಅಂದಿನಿಂದ ಭ್ರಷ್ಟಾಚಾರವು ಸಂಪೂರ್ಣವಾಗಿ ದೇಶದಿಂದ ಒಳ್ಳೆಯ ಕಾರಣಕ್ಕಾಗಿ ನಿರ್ಮೂಲವಾಗುತ್ತದೆ.

೭. ಸಾರಾಂಶ:

ನಾನು ವಿವರವಾಗಿ ಹೇಳಿದ್ದೇನೆ ಹೇಗೆ ಈ ‘೩ ಸಾಲಿನ ಕಾನೂನು’ ನಮ್ಮ ದೇಶದಿಂದ ಬಡತನ, ಪೋಲೀಸ್ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ, ಮುಂತಾದವುಗಳನ್ನು ಕಡಿಮೆ ಮಾಡುತ್ತದೆ ಎಂದು. ಆಸಕ್ತ ಓದುಗರು ನನಗೆ ನನ್ನ ಮೊಬೈಲ್ ಫ಼ೋನ್ ಮೇಲೆ ಕರೆಮಾಡಿ ಅಥವಾ ನನ್ನ ವಿಳಾಸದಲ್ಲಿ ನನ್ನನ್ನು ಭೇಟಿಮಾಡಬಹುದು. (ವಿಳಾಸ: ಎಫ಼್೧/ಎ, ಸುಪಥ್–೨, ಜುನ ವದಜ್ ಬಸ್ ನಿಲ್ದಾಣ, ಆಶ್ರಮದ ರಸ್ತೆ, ಅಹಮದಾಬಾದ್–೧೪; ಕಛೇರಿ ಸಮಯ: ಭಾನುವಾರ ೧೦.೦೦ ಬೆಳಿಗ್ಗೆ ಇಂದ ಮಧ್ಯಾಹ್ನ ೨.೦೦ರವರೆಗೆ.)

ನಿಮಗೆ ಈ ಅಹವಾಲು ಒಪ್ಪಿಗೆಯಾದಲ್ಲಿ http://petitiononline.com/rti2en/petition.html ನಲ್ಲಿ ಸಹಿಮಾಡಿರಿ. ಈ ಒಂದು ಸಣ್ಣ ಹೆಜ್ಜೆ ಆರ್.ಟಿ.ಐ ನ್ನು ಜಾರಿಗೊಳಿಸುವಲ್ಲಿ ಬಹಳ ಮುಖ್ಯವಾಗಿರುತ್ತದೆ.



**My (author's) brief introduction** : I, Rahul Chimanbhai Mehta, was a candidate in Gandhinagar Loksabha election in May-2009. election. I got 7300 votes, and was 4th rank (Ms Mallikaben got 3rd rank with 9300 votes). My sole goal is to get the proposed RTI2 law passed and also later enact **MRCM** law and enact **Right to Recall** laws in India. MRCM law will reduce poverty in 3-4 months and Right to Recall PM, CM, judges etc laws will reduce corruption in 2-3 months. I am forming **RRP** i.e. **"Right to Recall Party"** to campaign for these laws. I need your time to get these laws enacted.

ಅನುವಾದ: ಹು.ಕೆ.ಶ್ರೀಧರ